ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ	:	539
2	ಸದಸ್ಯರ ಹೆಸರು	:	ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
3	ಉತ್ತರಿಸುವ ದಿನಾಂಕ	:	24-09-2020
4	ಉತ್ತರಿಸುವ ಸಚಿವರು	:	ಗೃಹ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಖಾಲಿ ಇರುವ ಪೊಲೀಸ್ ಪೇದೆ, ಮುಖ್ಯಪೇದೆ, ಎ.ಎಸ್.ಐ. ಸಬ್ ಇನ್ಸ್‌ಪೆಕ್ಟರ್ ಹಾಗೂ ಮಹಿಳಾ ಪೇದೆಗಳ ಸಂಖ್ಯೆ ಎಷ್ಟು; (ಸಿವಿಲ್, ಸಿ.ಎ.ಆರ್/ಡಿ.ಎ.ಆರ್. ಕೆ.ಎಸ್.ಆರ್.ಪಿ. ಕೆ.ಐ.ಎಸ್.ಎಸ್. ಪ್ರತ್ಯೇಕವಾಗಿ ವಿವರಗಳನ್ನು ನೀಡುವುದು)	ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಪೊಲೀಸ್ ಪೇದೆ, ಮುಖ್ಯಪೇದೆ, ಎ.ಎಸ್.ಐ. ಸಬ್ ಇನ್ಸ್‌ಪೆಕ್ಟರ್ (ಸಿವಿಲ್, ಸಿ.ಎ.ಆರ್/ಡಿ.ಎ.ಆರ್, ಕೆ.ಎಸ್.ಆರ್.ಪಿ, ಕೆ.ಎಸ್.ಐ.ಎಸ್.ಎಫ್) ಹುದ್ದೆಗಳ ಮಾಹಿತಿಯನ್ನು **ಅನುಬಂಧದಲ್ಲಿ** ನೀಡಲಾಗಿದೆ.
ಆ)	ಎಷ್ಟು ಸಮಯದಿಂದ ಸದರಿ ಹುದ್ದೆಗಳು ಖಾಲಿ ಇವೆ;	ಪೊಲೀಸ್ ಇಲಾಖೆಯಲ್ಲಿ ನಿವೃತ್ತಿ, ಮುಂಬಡ್ತಿ, ನಿಧನ, ರಾಜೀನಾಮೆ ಮುಂತಾದ ಕಾರಣಗಳಿಂದ ರಿಕ್ತಸ್ಥಾನಗಳು ಉಂಟಾಗುತ್ತಿದ್ದು, ಈ ರಿಕ್ತಸ್ಥಾನಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಮುಂಬಡ್ತಿ ಮತ್ತು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಇದು ನಿರಂತರ ಪ್ರಕ್ರಿಯೆಯಾಗಿರುತ್ತದೆ.
ಇ)	ಇವುಗಳನ್ನು ಭರ್ತಿ ಮಾಡದಿರಲು ಕಾರಣಗಳೇನು;	
ಈ)	ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು;	ಪೊಲೀಸ್ ಇಲಾಖೆಯಲ್ಲಿನ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಮತ್ತು ಪೊಲೀಸ್ ಕಾನ್ಸ್‌ಟೇಬಲ್ ವೃಂದದ ವಿವಿಧ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಕೈಗೊಳ್ಳಲಾಗುತ್ತಿದೆ. ಸದರಿ ನಿಯಮಗಳಂತೆ ನೇಮಕಾತಿ ಅಧಿಸೂಚನೆಗಳನ್ನು ಪ್ರಕಟಿಸಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಬೇಕಾಗಿರುತ್ತದೆ. ನಂತರ ಅರ್ಹ ಅಭ್ಯರ್ಥಿಗಳಿಗೆ ಸಬ್-ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ಸಂಬಂಧಿಸಿದಂತೆ ದೇಹದಾರ್ಢ್ಯತೆ ಪರೀಕ್ಷೆಗಳನ್ನು ನಡೆಸಿ, ಪರೀಕ್ಷೆಗಳಲ್ಲಿ ಅರ್ಹರಾದ ಅಭ್ಯರ್ಥಿಗಳಲ್ಲಿ ಲಿಖಿತ ಪರೀಕ್ಷೆಗಳನ್ನು ನಡೆಸಬೇಕಾಗಿರುತ್ತದೆ. ಅದೇರೀತಿ ಕಾನ್ಸ್‌ಟೇಬಲ್ ಹುದ್ದೆಗಳಿಗೆ ಲಿಖಿತ ಪರೀಕ್ಷೆಯನ್ನು ನಡೆಸಿ ನಂತರ ದೇಹದಾರ್ಢ್ಯತೆ ಪರೀಕ್ಷೆಗಳನ್ನು ನಡೆಸಬೇಕಾಗಿರುತ್ತದೆ. ಲಿಖಿತ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ನಡೆಸಿದ ನಂತರ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ವೈದ್ಯಕೀಯ ಪರೀಕ್ಷೆಯನ್ನು ನಡೆಸಿದ ನಂತರ ವೈದ್ಯಕೀಯ ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಿ ದ್ವಿತೀಯ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ತದನಂತರ ಆಯ್ಕೆಯಾದ ಅಭ್ಯರ್ಥಿಗಳ ಗುಣ ಮತ್ತು ನಡತೆ ಹಾಗೂ ದಾಖಲೆಗಳ ಪರಿಶೀಲನೆ ಕಾರ್ಯವನ್ನು ಪೂರ್ಣಗೊಳಿಸಿದ ನಂತರ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ, ನೇಮಕಾತಿ ಆದೇಶಗಳನ್ನು ಹೊರಡಿಸಬೇಕಾಗಿರುತ್ತದೆ. ನೇಮಕಾತಿಯ ಪ್ರಕ್ರಿಯೆಯ ಎಲ್ಲಾ ಹಂತಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಸಮಯಕ್ಕೆ ಅನುಗುಣವಾಗಿ ನೇಮಕಾತಿ ಪ್ರಕ್ರಿಯೆಗಳನ್ನು ಮಾಡಲಾಗುತ್ತಿದೆ.
ಉ)	ಯಾವ ಕಾಲಮಿತಿಯಲ್ಲಿ ಸದರಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು?	

		ಮುಂಬಡ್ತಿಗೆ ಸಂಬಂಧಿಸಿಂತೆ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಹಾಗೂ ಚಾಲ್ತಿಯಲ್ಲಿರುವ ಜೇಷ್ಠತಾ ಪಟ್ಟಿಯನ್ವುಸಾರ ಅರ್ಹ ಅಧಿಕಾರಿಗಳಿಗೆ ಕಾಲಾನುಕ್ರಮೇಣ ಲಭ್ಯವಾಗುವ ರಿಕ್ತ ಸ್ಥಾನಗಳ ಎದುರು ನಿಯಮಾನುಸಾರ ಭರ್ತಿ ಮಾಡಿಕೊಳ್ಳಲಾಗುತ್ತಿದೆ.

ಸಂಖ್ಯೆ: ಒಇ 94 ಪಿಇಐ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 539ಕ್ಕೆ ಸಂಬಂಧಿಸಿದ ಅನುಬಂಧ

(ದಿನಾಂಕ:31.08.2020 ರಂತೆ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಖಾಲಿ ಹುದ್ದೆಗಳ ವಿವರ)

ಕ್ರ.ಸಂ.	ಹುದ್ದೆ	ರಿಕ್ತಸ್ಥಾನ
ಸಬ್-ಇನ್ಸ್‌ಪೆಕ್ಟರ್		
1	ಪಿಎಸ್ಐ (ಸಿವಿಲ್)	1553
2	ಡಿಎಸ್ಐ (ಸಿಐಡಿ)	7
3	ಪಿಎಸ್ಐ(ರಾಜ್ಯ ಗುಪ್ತವಾರ್ತೆ)	6
4	ಆರ್‌ಎಸ್ಐ(ಸಿಎಆರ್/ಡಿಎಆರ್)	300
5	ಆರ್‌ಎಸ್ಐ (ಕೆಎಸ್‌ಆರ್‌ಪಿ)	100
6	ಪಿಎಸ್ಐ (ಕೆಎಸ್ಐಎಸ್ಎಫ್)	128
ಒಟ್ಟು (1)		**2094**
ಎ.ಎಸ್.ಐ.		
1	ಎಎಸ್ಐ (ಸಿವಿಲ್)	409
2	ಎಎಸ್ಐ (ಕೆಎಸ್ಐಎಸ್ಎಫ್)	347
3	ಎಆರ್‌ಎಸ್ಐ(ಸಿಎಆರ್/ಡಿಎಆರ್)	199
4	ಎಆರ್‌ಎಸ್ಐ (ಕೆಎಸ್‌ಆರ್‌ಪಿ)	69
ಒಟ್ಟು (2)		**1024**
ಪೊಲೀಸ್ ಹೆಡ್-ಕಾನ್ಸ್‌ಟೇಬಲ್		
1	ಹೆಚ್.ಸಿ (ಸಿವಿಲ್)	518
2	ಎ.ಹೆಚ್.ಸಿ(ಸಿಎಆರ್/ಡಿಎಆರ್)	809
3	ಆರ್.ಹೆಚ್.ಸಿ (ಕೆಎಸ್‌ಆರ್‌ಪಿ)	176
4	ಹೆಚ್.ಸಿ (ಕೆಎಸ್ಐಎಸ್ಎಫ್)	22
ಒಟ್ಟು (3)		**1525**
ಪೊಲೀಸ್ ಕಾನ್ಸ್‌ಟೇಬಲ್		
1	ಆರ್.ಪಿ.ಸಿ (ಕೆಎಸ್‌ಆರ್‌ಪಿ)	4025
2	ಪಿ.ಸಿ (ಸಿವಿಲ್)	6401
3	ಎ.ಪಿ.ಸಿ(ಸಿಎಆರ್/ಡಿಎಆರ್)	5105
4	ಪಿ.ಸಿ (ಕೆಎಸ್ಐಎಸ್ಎಫ್)	29
ಒಟ್ಟು (4)		**15560**
ಒಟ್ಟು (1), (2), (3) & (4)		**20203**